ಸಾಕ್ಷಿಯನ್ನು ದಿನಾಂಕಃ 06.09.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್.ವಿ.ಎ. ವಕೀಲರಿಂದಃ**

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ಭೂ ನ್ಯಾಯ ಮಂಡಳಿಯವರು ನೀಡಿದ ನಮೂನೆ-7ರ ಪ್ರತಿಯನ್ನು ನಿ.ಡಿ. 20 ಎಂದು, ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ನಿ.ಡಿ. 21 ಎಂದು, ನಮೂನೆ-10ರ ಪ್ರತಿಯನ್ನು ನಿ.ಡಿ. 22 ಎಂದು, ಎಂ.ಆರ್.ನಂಃ 7305ರ ಪ್ರತಿಯನ್ನು ನಿ.ಡಿ. 23 ಎಂದು, ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಪಾವತಿಸಿದ ತೆರಿಗೆ ಪ್ರತಿಯನ್ನು ನಿ.ಡಿ. 24 ಎಂದು, ಹನುಮಂತ ನಾಗಪ್ಪ ಗೌಡ ರವರ ಮರಣ ಪತ್ರದ ಪ್ರತಿಯನ್ನು ನಿ.ಡಿ. 25 ಎಂದು, ನಮೂನೆ 21 ರ ನೋಟಿಸಿನ ಪ್ರತಿಯನ್ನು ನಿ.ಡಿ. 26 ಎಂದು, ಎಂ.ಆರ್.ನಂಃ 64/2006-07ರ ಪ್ರತಿಯನ್ನು ನಿ.ಡಿ. 27 ಎಂದು, ಶಾಲಾ ದೃಢೀಕರಣ ಪತ್ರದ ಪ್ರತಿಯನ್ನು ನಿ.ಡಿ. 28 ಎಂದು, ವರ್ಗಾವಣಾ ಪ್ರಮಾಣ ಪತ್ರದ ಪ್ರತಿಯನ್ನು ನಿ.ಡಿ. 29 ಎಂದು, ತನ್ನ ಕುಟುಂಬದ ರೇಷನ್ ಕಾರ್ಡ, ತನ್ನ ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿಯ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಮೂಲದಾಖಲೆಗಳೊಂದಿಗೆ ಪರಿಶೀಲಿಸಿ ನೋಡಿ ಕ್ರಮವಾಗಿ ನಿ.ಡಿ. 30 ರಿಂದ 32 ಎಂದು, 2 ನೇ ಪ್ರತಿವಾದಿಯ ಮರಣ ಪ್ರಮಾಣ ಪತ್ರವನ್ನು ನಿ.ಡಿ. 33 ಎಂದು, 2 ನೇ ಪ್ರತಿವಾದಿಯ ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿಯ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಮೂಲದಾಖಲೆಗಳೊಂದಿಗೆ ಪರಿಶೀಲಿಸಿ ನೋಡಿ ಕ್ರಮವಾಗಿ ನಿ.ಡಿ. 34 ಮತ್ತು 35 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.